ಅ.ದಾ.ನಂ.140/2011
ಡಿ.ಡಬ್ಲೂ:1

**<u>ಸಾಕ್ಷಿಯನ್ನು ಇಂದು ದಿನಾಂಕಃ 18.11.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು</u>**
**<u>ಪಾಟೀ ಸವಾಲುಃ ಶ್ರೀ.ಬಿ ವಿ ಪಿ., ವಕೀಲರಿಂದ ವಾದಿ ಪರವಾಗಿ</u>**

1. ದಾವಾ ಆಸ್ತಿ ಸರ್ವೆ ನಂ.286/1 ವಿಸ್ತೀರ್ಣ 7 ಎಕರೆ 25 ಗುಂಟೆ ಜಮೀನವು ಸರಕಾರದ ಜಮೀನು ಎಂದರೆ ಸರಿ. ದಾವಾ ಆಸ್ತಿ ಸರ್ವೆ ನಂ.286/1 ವಿಸ್ತೀರ್ಣ 10 ಗುಂಟೆ ಜಮೀನವು ಸರಕಾರದ ಜಮೀನು ಎಂದರೆ ಸಾಕ್ಷಿಯು ಮೊದಲು ಇತ್ತು ಆದರೆ ಈಗ ಇಲ್ಲ ಎಂದು ಹೇಳುತ್ತಾರೆ. ನಿ.ಪಿ-3 ರಂತೆ ಡ.ನಂ.2119 ರಲ್ಲಿ ಬರೆದಿರುವ ಅಂಶಗಳು ಸರಿಯಾಗಿ ಇರುತ್ತದೆ ಎಂದರೆ ಸರಿ. ನಿಪಿ.3 ರಲ್ಲಿ ನಮೂದಿಸಿರುವ ಸರ್ವೆ ನಂ.174/4, 174/3, 174/2 ಮತ್ತು 174/1 ರ ಆಸ್ತಿಗಳು ಈಗ ಸರ್ವೆ ನಂ.286/1 ಮತ್ತು 286/2 ಎಂದು ಆಗಿರುತ್ತವೆ ಎಂದರೆ ಸರಿ. ನಿ.ಪಿ-3 ರಲ್ಲಿ ನಮೂದಿಸಿರುವ ಆಸ್ತಿಗಳನ್ನು ಮುಸಲ್ಮಾನ ಮತ್ತು ಹಿಂದೂ ಸಮುದಾಯಗಳ ಸ್ಮಶಾನಕ್ಕಾಗಿ ನೀಡಲಾಗಿರುತ್ತದೆ ಎಂದರೆ ಸರಿ.

2. 1959 ರಲ್ಲಿ ಮಸಬಿನಾಳದಲ್ಲಿರುವ ಹಿಂದೂ ಮತ್ತು ಮುಸ್ಲೀಂ ಜನಸಂಖ್ಯೆಯು ಈಗ ಮೂರು ಪಟ್ಟು ಜನಸಂಖ್ಯೆಯು ಜಾಸ್ತಿ ಆಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಹಿಂದೂಗಳು ಮತ್ತು ಮುಸ್ಲೀಂ ಮೃತಪಟ್ಟವರ ಸ್ಮಾರಕಗಳನ್ನು ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿ. ಸದರಿ ಸ್ಮಾರಕಗಳನ್ನು ತೆಗೆದು ಸದರಿ ಸ್ಥಳದಲ್ಲಿ ಬೇರೆಯವರ ಮೃತರ ಶವವನ್ನು ಊಳಲು ಬರುವುದಿಲ್ಲ ಎಂದರೆ ಸರಿ.

3. ಸಾಮಾನ್ಯವಾಗಿ ಮಸಬಿನಾಳದಲ್ಲಿ ಹಿಂದೂ ಮತ್ತು ಮುಸ್ಲೀಂ ಜನಸಂಖ್ಯೆ ಹೆಚ್ಚಾಗಿರುವುದರಿಂದ ಇನ್ನೂ ಹೆಚ್ಚಿನ ಜಾಗೆಯು ಸ್ಮಶಾನಕ್ಕಾಗಿ ಬೇಕಾಗುತ್ತದೆ ಎಂದರೆ ಸರಿ. ಮಸಬಿನಾಳದಲ್ಲಿ ವಾಸವಾಗಿರುವ ಮುಸ್ಲೀಂ ಸಮುದಾಯದವರು ಹೆಚ್ಚಿನ ಜಾಗ ಬೇಕು ಎಂದು ಹೇಳಿ ನಮ್ಮ ಕಛೇರಿಗೆ

ಮನವಿ ಪತ್ರವನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ನನ್ನ ಗಮನಕ್ಕೆ ಇಲ್ಲ ಎಂದು ಹೇಳುತ್ತಾರೆ. ನಮ್ಮ ಹಿಂದಿನ ತಹಶೀಲ್ದಾರವರಿಗೆ ಏನಾದರೂ ಅರ್ಜಿಗಳನ್ನು ಕೊಟ್ಟಿದ್ದರು ಸದರಿ ಅರ್ಜಿಗಳನ್ನು ನಮಗೂ ಕೂಡಾ ಬಂಧನಕಾರಕ ಇರುತ್ತವೆ ಎಂದರೆ ಸರಿ. ಮುಸ್ಲೀಂ ಸಮುದಾಯದವರು ನಮ್ಮ ಕಛೇರಿಗೆ ಅರ್ಜಿಯನ್ನು ಕೊಟ್ಟಿದ್ದರು ಕೂಡಾ ಸರಿಯಾದ ಪ್ರತ್ಯುತ್ತರವನ್ನು ನೀಡಿಲ್ಲ ಎಂದರೆ ಸಾಕ್ಷಿಯು ನನ್ನ ಗಮನಕ್ಕೆ ಇಲ್ಲ ಎಂದು ಹೇಳುತ್ತಾರೆ.

4. ವಾದಿಗಳು ನಿಪಿ-6 ರಂತೆ ಮಾನ್ಯ ಜಿಲ್ಲಾಧಿಕಾರಿಗಳು, ಸಹಾಯಕ ಆಯುಕ್ತಕರು ಮತ್ತು ತಹಶೀಲ್ದಾರಿವರಿಗೆ ನೋಟಿಸ್ಸನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ನೋಟಿಸಿಗೆ ನಾವು ಯಾವುದೇ ಪ್ರತ್ಯುತ್ತರವನ್ನು ಕೊಡದೇ ಮೌನವಾಗಿತ್ತು ಎಂದರೆ ನನ್ನ ಗಮನಕ್ಕೆ ಇಲ್ಲ ಎಂದು ಹೇಳುತ್ತಾರೆ. ನನಗೆ ಎಲ್ಲಾ ಗೊತ್ತಿದ್ದರೂ ಕೊಡಾ ಉದ್ದೇಶ ಪೂರಕವಾಗಿ ನನ್ನ ಗಮನಕ್ಕೆ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಪ್ರತಿವಾದ ಪತ್ರದಲ್ಲಿ ವಸ್ತುಸ್ಥಿತಿಗೆ ವಿರುದ್ಧವಾಗಿ ಹಾಗೂ ಹಿಂದಿನ ಸರಕಾರದ ಆದೇಶಗಳಿಗೆ ವಿರುದ್ಧವಾಗಿ ಅಂಶಗಳನ್ನು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಮತ್ತು ಪ್ರತಿವಾದ ಪತ್ರದಲ್ಲಿ ಸುಳ್ಳು ಅಂಶಗಳನ್ನು ನಮೂದಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ-ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

**ಹೆಚ್ಚುವರಿ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬಸವನ ಬಾಗೇವಾಡಿ.**